ಎನ್. ಜಗನ್ನಾಥ ಪ್ರಕಾಶ್

# ನಾಟಕಗಳ ನೇಕಾರ ಧುತ್ತರಗಿ

ಕನ್ನಡ ವೃತ್ತಿರಂಗ ಭೂಮಿಗೆ ಜೀವಂತಿಕೆ ತಂದು ವಿಭಿನ್ನ ನಾಟಕ ರಚನೆ ಮೂಲಕ ಪ್ರೇಕ್ಷಕರನ್ನು ಮುದಗೊಳಿಸಿದ ಕವಿ, ನಾಟಕಕಾರ, ನಿರ್ದೇಶಕ ಪುಂಡಲೀಕ ಗೌಡ ಧುತ್ತರಗಿ.

ಕುಬಸದ(ಖಣ) ವ್ಯಾಪಾರದಿಂದ ಶ್ರೀಮಂತವಾಗಿದ್ದ ಕುಟುಂಬದಲ್ಲಿ ಹುಟ್ಟಿದವರು ಪಿ.ಬಿ. ಧುತ್ತರಗಿ. ಬದುಕಿನಲ್ಲಿ ಏಳು ಬೀಳುಗಳನ್ನು ಕಂಡ ಅವರ ಕೈ ಹಿಡಿದದ್ದು ರಂಗಭೂಮಿ. ತಾತನ ಕಾಲದಲ್ಲಿ(ಮಲಕನ ಗೌಡ) ಶ್ರೀಮಂತಿಕೆಯಿಂದ ತುಂಬಿ ತುಳುಕುತ್ತಿದ್ದ ಮನೆ ಪುಂಡಲೀಕನ ಗೌಡರು ಹುಟ್ಟುವ ವೇಳೆಗೆ ಬಡತನದ ಸುಳಿಯಲ್ಲಿ ಸಿಕ್ಕಿತ್ತು. ವ್ಯಾಪಾರ ಕ್ಷೀಣಿಸಿ ಕುಟುಂಬದವರು ಕುಲಕಸುಬಾದ ನೇಕಾರಿಕೆ ಮಾಡುತ್ತಿದ್ದರು. ಆದರೆ, ಅದು ಹೊಟ್ಟೆ ತುಂಬಿಸುತ್ತಿರಲಿಲ್ಲ.

ಪರಿಸ್ಥಿತಿ ಉತ್ತಮವಾಗಿದ್ದ ದಿನಗಳಲ್ಲಿ ಪುಂಡಲೀಕಪ್ಪನ ತಂದೆ ಬಸವನಗೌಡರು ನಾಟಕದ ಗೀಳು ಹಚ್ಚಿಕೊಂಡಿದ್ದರು. ಮನೆ ಸಾಲದ ಸುಳಿಗೆ ಸಿಕ್ಕಾಗ ಅದನ್ನು ರಕ್ಷಿಸಲು ಅವರು ಆಯ್ದುಕೊಂಡಿದ್ದು ಅಭಿನಯವನ್ನು. ಆ ವೇಳೆಗೆ ಮಗನನ್ನು ಶಾಲೆಗೆ ಸೇರಿದ್ದರೂ ಪುಸ್ತಕಕೊಳ್ಳುವುದು ಅಸಾಧ್ಯವೆನ್ನಿಸಿದಾಗ ಅವನನ್ನು ಶಾಲೆ ಬಿಡಿಸಿ ನೂಲೆಳೆ ಬಿಡಿಸುವ ಕೂಲಿ ಕೆಲಸಕ್ಕೆ ಹಚ್ಚಿದರು. ಪುಂಡಲೀಕಪ್ಪನ ತಂದೆ ಬಸವನಗೌಡ ಅವರು ಕೊನೆಗೊಂದು ದಿನ ತಿಂಗಳ ಸಂಬಳದ ಮೇಲೆ ವೃತ್ತಿ ರಂಗಭೂಮಿ ನಟರಾಗಿ ಸಿದ್ರಾಮಪ್ಪನವರ ಕಂಪೆನಿ ಸೇರಿದರು. ತಿಂಗಳ ಸಂಬಳ ಸಿಗತೊಡಗಿದಾಗ ಇದ್ದೊಬ್ಬ ಮಗನನ್ನು ಗೌಡರು ಮತ್ತೆ ಶಾಲೆಗೆ ಕಳುಹಿಸಿದರು. ಆದರೆ ಪುಂಡಲೀಕಪ್ಪನಿಗೆ ಓದಿಗಿಂತ ಆಟದಲ್ಲಿ ಹೆಚ್ಚು ಆಸಕ್ತಿ. ರಜೆಯಲ್ಲಿ ಮಗನನ್ನು ಕಂಪೆನಿಗೆ ಕರೆದೊಯ್ದರು. ಆ ಹೊತ್ತಿಗೆ ಬಸವನಗೌಡರು ಜನಪ್ರಿಯ ಕಲಾವಿದರಾಗಿ ಮೆಚ್ಚುಗೆ ಪಡೆದಿದ್ದರು. ಹಂದಿಗನೂರು ಮಾಲೀಕತ್ವದ ವಿಶ್ವರಂಜನ ನಾಟಕ ಮಂಡಲಿಯಲ್ಲಿ ಅವರು ಪ್ರಮುಖ ಪಾತ್ರ ಗಳಿಸಿದ್ದರು.

ಹಂದಿಗನೂರು ಕಂಪೆನಿಗಾಗಿ ಹರಿಶ್ಚಂದ್ರ ನಾಟಕ ಬರವಣಿಗೆ ಕೂಡ ಮಾಡುತ್ತಿದ್ದ ಕೆ.ಕೆ. ಹೆಗಡೆ ಅವರಿಗೆ ಸಹಾಯಕನಾಗಿ ಪುಂಡಲೀಕಪ್ಪ ನೇಮಕಗೊಂಡ. ಲೇಖಕರಿಗೆ ಕಾಫಿ–ತಿಂಡಿ ತಂದು ಕೊಡುವುದು, ಅವರು ಹೇಳಿದ ಕೆಲಸ ಮಾಡುವುದು ಆತನ ಪಾಲಿಗೆ ಬಂತು. ಸಿದ್ರಾಮಪ್ಪ ಮತ್ತು ಹೆಗಡೆ ಅವರು ನಾಟಕ ರಚನೆ ಸಂದರ್ಭದಲ್ಲಿ ಮಾಡುತ್ತಿದ್ದ ಚರ್ಚೆ, ವಿಮರ್ಶೆ ಎಲ್ಲವೂ ಪುಂಡಲೀಕಪ್ಪನಲ್ಲಿ ಆಸಕ್ತಿ ಹುಟ್ಟಿಸಿದವು. ಆದರೆ ರಜೆ ಮುಗಿದಿದ್ದರಿಂದ ಆತ ಶಾಲೆಗಾಗಿ ತನ್ನ ಊರಿಗೆ ಮರಳಬೇಕಾಯಿತು.

ಪಾತ್ರಾಭಿನಯದಿಂದಲೇ ಜೀವನ ಸಾಗಿಸುತ್ತಿದ್ದ ಬಸವನಗೌಡರು ಕಾಯಿಲೆ ಬಿದ್ದು ಹಳ್ಳಿಗೆ ಹಿಂತಿರುಗಬೇಕಾಯಿತು. ಕುಟುಂಬದ ಪೋಷಣೆಗಾಗಿ ಕುಲವೃತ್ತಿ ಹಿಡಿಯಬೇಕಾಯಿತು. ಪುಂಡಲೀಕಪ್ಪ ಓದಿಗೆ ಶರಣು ಹಾಕಿ ನೇಕಾರಿಕೆ ಶುರು ಮಾಡಿ ಮನೆಗೆ ನೆರವಾಗತೊಡಗಿದ. ಆತನಿಗೆ ನಾಟಕ ನೋಡುವ ಖಯಾಲಿ. ಜೊತೆಗೆ ಓದುವ ಹುಚ್ಚು ಹತ್ತಿಕೊಂಡಿತು.

ಮದುವೆ ಮಾಡಿದರೆ ಜವಾಬ್ದಾರಿ ಬಂದೀತು ಎಂಬ ಆಶಯದೊಡನೆ ಬಸವನಗೌಡರು ಮಗ ಪುಂಡಲೀಕಗೌಡರ ಲಗ್ನ ಮಾಡಿದರು. ಅದೇ ಸಂದರ್ಭದಲ್ಲಿ ಅಪೂರ್ಣವಾಗಿದ್ದ ನಾಟಕವೊಂದನ್ನು